# ಮತ್ತೊಬ್ಬಳು ಮಯೂರಿ!

ಚಂದನವನಕ್ಕೆ ಮತ್ತೊಬ್ಬಳು ಮಯೂರಿ ಹೆಜ್ಜೆಯಿಟ್ಟಿದ್ದಾರೆ. ಸ್ಟಾರ್ ನಟಿಯಾಗುವ ಹಂಬಲ ಇಲ್ಲದ ಈ ಹುಡುಗಿಗೆ ಇಮೇಜ್‌ನ ಹಂಗಿಲ್ಲದೆಯೇ ಜನರ ಮನಸಲ್ಲಿ ಉಳಿಯುವಂಥ ಪಾತ್ರ ಮಾಡುವ ಆಸೆ.

■ ಪದ್ಮನಾಭ ಭಟ್



ಮಯೂರಿ ಅಂದಾಕ್ಷಣ ಎಲ್ಲರಿಗೂ 'ಅಶ್ವಿನಿ ನಕ್ಷತ್ರ'ದ ಹುಡುಗಿಯೇ ಕಣ್ಣೆದುರು ಬರುತ್ತಾರೆ. ಆ ಹುಡುಗಿ ಈಗ ತಾಯಿಯಾಗುವ ಸಂಭ್ರಮದಲ್ಲಿ ಮುಳುಗಿದ್ದಾರೆ. ಇತ್ತ ಚಂದನವನದ ನೆಲದ ಮೇಲೆ ಇನ್ನೊಬ್ಬಳು ಮಯೂರಿ ಹೆಜ್ಜೆಯೂರುತ್ತಿದ್ದಾರೆ. ಆ ಮಯೂರಿ ಕಿರುತೆರೆಯ ಚಿಮ್ಮುಹಲಗೆಯಿಂದ ಸಿನಿಮಾರಂಗಕ್ಕೆ ಜಿಗಿದರೆ ಇವರು ಪಾರ್ಮಾಸುಟಿಕಲ್ ಲ್ಯಾಬ್‌ನಿಂದ ನೇರವಾಗಿ ಬಣ್ಣದಲೋಕಕ್ಕೆ ಇಳಿದಿದ್ದಾರೆ.

ಮಯೂರಿ ಹುಟ್ಟಿ ಬೆಳೆದಿದ್ದೆಲ್ಲ ಬೆಂಗಳೂರೇ. ಬಾಲ್ಯದಲ್ಲಿ ವಿಷ್ಣುವರ್ಧನ್ ಸಿನಿಮಾಗಳೆಂದರೆ ನಿದ್ದೆಗಣ್ಣಲ್ಲೂ ಎದ್ದುನಿಲ್ಲುವಷ್ಟು ಮೋಹ ಅಂಟಿಸಿಕೊಂಡಿದ್ದ ಇವರು, ಮನೆಗೆ ಬಂದವರ ಮುಂದೆಲ್ಲ ಸಿನಿಮಾದ ದೃಶ್ಯಗಳನ್ನು ನಟಿಸಿ ತೋರಿಸುತ್ತಿದ್ದರು. ಆದರೆ ನಂತರ ಆ ನಟನಾಕೌಶಲವನ್ನು ನಾಚಿಕೆಯ ಸೆರಗು ಮುಚ್ಚಿಬಿಟ್ಟಿತು. ಹಾಗಾಗಿಯೇ ಎಂಜಿನಿಯರಿಂಗ್ ಓದುವವರೆಗೂ ಯಾವತ್ತೂ ಮತ್ತೆ ವೇದಿಕೆ ಹತ್ತಿದ್ದೇ ಇಲ್ಲ.

ಎಂಜಿನಿಯರಿಂಗ್ ಎರಡನೇ ವರ್ಷದಲ್ಲಿದ್ದಾಗ ಕಾಲೇಜಿನಲ್ಲಿದ್ದ 'ಚಿರರಂಗ' ನಾಟಕತಂಡ ಸೇರಿಕೊಂಡರು. ಇಲ್ಲಿಯೂ ಅವರದ್ದು ಪ್ರಸಾಧನ ಮತ್ತು ವೇದಿಕೆ ಹಿಂದಿನ ಕೆಲಸವೇ ವಿನಾ ಬಣ್ಣ ಹಚ್ಚಿಕೊಳ್ಳಲಿಲ್ಲ. ಸ್ನೇಹಿತನ ಒತ್ತಾಯಕ್ಕೆ ಒಂದು ಸ್ಕಿಟ್‌ನಲ್ಲಿ ನಟಿಸಲು ಒಪ್ಪಿಕೊಂಡಿದ್ದೇನೋ ನಿಜ. ಆದರೆ ನಂತರ ಆ ಪಾತ್ರವನ್ನೇ ಕೈಬಿಡಲಾಯಿತು. 'ಸ್ಕಿಟ್‌ನಿಂದ ಆ ಪಾತ್ರ ಕೈ ಬಿಟ್ಟಾಗ ನನಗೆ ಬೇಜಾರಾಗುವ ಬದಲು ಖುಷಿಯಾಗಿತ್ತು. ಅಬ್ಬಾ, ಸ್ಟೇಜ್ ಮೇಲೆ ಹತ್ತುವುದು ತಪ್ಪಿತಲ್ಲ ಎಂದು ಸಮಾಧಾನ ಪಟ್ಟುಕೊಂಡಿದ್ದೆ' ಎಂದು ನಗುತ್ತಾರೆ ಮಯೂರಿ.

ಹೀಗಿದ್ದ ಮಯೂರಿ ಅವರನ್ನು ಕ್ಯಾಮೆರಾ ಎದುರಿಗೆ ತಂದಿದ್ದು ಸ್ನೇಹಬಳಗವೇ. ಅವರ ಸ್ನೇಹಿರೊಬ್ಬರು ಮಾಡಿದ ಕಿರುಚಿತ್ರದಲ್ಲಿ ಒಂದೇ ಒಂದು ಸಣ್ಣ ಡೈಲಾಗ್ ಇರುವ ಪುಟ್ಟ ಪಾತ್ರದಲ್ಲಿ ನಟಿಸಲು ಒತ್ತಾಯಕ್ಕೆ ಮಣಿದೇ ಒಪ್ಪಿಕೊಂಡಿದ್ದರು. ನಂತರ ಅದೇ ಸ್ನೇಹದ ಕಟ್ಟುಬಿದ್ದು 'ದರ್ಪಣ' ಎನ್ನುವ ಇನ್ನೊಂದು ಕಿರುಚಿತ್ರದಲ್ಲಿಯೂ ನಟಿಸಿದರು.

ಬೆಂಗಳೂರಿನಲ್ಲಿಯೇ ಎಂಜಿನಿಯರಿಂಗ್ ಮುಗಿಸಿದ ಮಯೂರಿ, ಕೆಲಸಕ್ಕಾಗಿ ಹೈದರಾಬಾದ್‌ಗೆ ಹೋಗಬೇಕಾಯ್ತು. ಅಲ್ಲಿನ ಫಾರ್ಮಾಸುಟಿಕಲ್ ಕಂಪನಿಯೊಂದಲ್ಲಿ ಎರಡು ವರ್ಷ ಕೆಲಸ ಮಾಡಿದರು. 'ಅದೇ ಮೊದಲ ಬಾರಿಗೆ ನಾನು ಮನೆಯನ್ನು ಬಿಟ್ಟು ಒಬ್ಬಳೇ ಹೊರಗೆ ಹೋಗಿ ಅಷ್ಟು ದಿನ ಉಳಿದುಕೊಂಡಿದ್ದು. ಆ ಎರಡು ವರ್ಷಗಳ ಅನುಭವದಿಂದ ನಾನು ಸಾಕಷ್ಟು ವಿಷಯಗಳನ್ನು ಕಲಿತುಕೊಳ್ಳಲು ಸಾಧ್ಯವಾಯ್ತು' ಎಂದು ಅವರು ನೆನಪಿಸಿಕೊಳ್ಳುತ್ತಾರೆ.

ಲ್ಯಾಬ್‌ನಲ್ಲಿ ರಾಸಾಯನಿಕಗಳ ಜೊತೆ ಕೆಲಸ ಮಾಡುತ್ತಿದ್ದಾಗಲೂ ಅವರ ಮನಸ್ಸು ನಟನಾ ರಸಾಯನದ ಕಡೆಗೇ ತುಡಿಯುತ್ತಿತ್ತು. ಹಾಗಾಗಿಯೇ ರಜ ತೆಗೆದುಕೊಂಡು ಬೆಂಗಳೂರಿಗೆ ಬಂದು 'ನಮ್ಮ ಮೆಟ್ರೋ, ನಮ್ಮ ಕಥೆ' ಎಂಬ ಕಿರುಚಿತ್ರದಲ್ಲಿ ಅಭಿನಯಿಸಿ ಹೋದರು.

ಎರಡು ವರ್ಷದ ನಂತರ ಮುಂದೆ ಓದಬೇಕು ಎನ್ನುವ ಆಸೆಯಿಂದ ಕೆಲಸ ಬಿಟ್ಟು ಬೆಂಗಳೂರಿಗೆ ಬಂದ ಮಯೂರಿಗೆ 'ಫಾಲನ್' ಸಿನಿಮಾದಲ್ಲಿ ನಟಿಸುವ